2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 154/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮಂಜುನಾಥ | | ಪಿಡಬ್ಲೂ - 12 |
| ತಂದೆಯ ಹೆಸರು | - ಸಗಣಪ್ಪ ನಾಯ್ಕ | | ಸಿಡಬ್ಲೂ - 19 |
| ವಯಸ್ಸು | - 45 ವರ್ಷ | | |
| ಉದ್ಯೋಗ | - ಹೆಚ್.ಸಿ.311, ಕೊಪ್ಪ ಪೋಲೀಸ್ ಠಾಣೆ (ಅಮಾನತಿನಲ್ಲಿದ್ದೇನೆ) | | |
| ವಾಸ ಸ್ಥಳ | - ಕೊಪ್ಪ | | |

ದಿನಾಂಕಃ **30.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2017 ರಿಂದ ಜುಲೈ 2024 ರವರೆಗೆ ನ.ರಾ.ಪುರ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 18.06.2019 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 10.30 ಕ್ಕೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಪ್ರವವ ರವಾಸಿದ್ದೇನೆ. ದೂರನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಪ್ರವವ ವನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ.

3. ನಾನು ದಿಃ 18.06.2019 ರಂದು ಕೃತ್ಯಕ್ಕೆ ಬಳಸಿದ ಚಾಕುವನ್ನು ತಂದು ಚಾಸಾ.20 ರವರ ಮುಂದೆ ಹಾಜರುಪಡಿಸಿದ್ದನ್ನು ದಿಃ 19.06.2019 ರಂದು ಚಾಸಾ.20 ರವರು ನಿಪಿ.5 ರಂತೆ ಮಹಜರು ಕ್ರಮ ಜರುಗಿಸಿ ಅಮಾನತುಪಡಿಸಿಕೊಂಡಿದ್ದಾರೆ. ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರವನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದೆ. ನಾನು ಹಾಜರುಪಡಿಸಿದ

ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

4. ದಿಃ 19.06.2019 ರಂದು ಘಟನಾ ಸ್ಥಳದಲ್ಲಿ ನಡೆದ ವಿವರದ ಬಗ್ಗೆ ವರದಿ ಸಲ್ಲಿಸಿದ್ದೇನೆ.

ಪಾಟೀಸವಾಲು: ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿ

5. ದಿಃ 18.06.2019 ರಂದು ರಾತ್ರಿ ಪಿರ್ಯಾದಿಯಿಂದ ದೂರು ದಾಖಿಲಿಸಿದ ತಕ್ಷಣ ಅವರನ್ನು ಆಸ್ಪತ್ರೆಗೆ ಕಳುಹಿಸಿರಲಿಲ್ಲ. ಅಂದು ಪಿರ್ಯಾದಿಯ ಮುಂದುವರೆದ ಹೇಳಿಕೆ ಪಡೆದಿರುವುದಿಲ್ಲ.

6. ದಿಃ 18.06.2019 ರಂದು ರಾತ್ರಿ 9.00 ಗಂಟೆಯಿಂದ ನಾನು ಠಾಣಾ ಪ್ರಭಾರದಲ್ಲಿದ್ದೆ. ಅಂದು ಯಾರಿಂದ ಠಾಪಾ ಪ್ರಭಾರ ವಹಿಸಿಕೊಂಡಿದ್ದೇನೆ ಎಂದು ಈಗ ನೆನಪಿಲ್ಲ. ಅಂದು ನಾನು ವಿಶ್ರಾಂತಿಯಲ್ಲಿದ್ದಾಗ ಮದ್ಯಾಹ್ನ 2.00 ಗಂಟೆಗೆ ಚಾಸಾ.20 ರವರು ಕರೆ ಮಾಡಿ ಶೆಟ್ಟಿಕೊಪ್ಪ ಎಂಬಲ್ಲಿ ಹೋಟೆಲ್ ಮುಂದುಗಡೆ ವಾಹನ ನಿಲ್ಲಿಸುವುದರಿಂದ ಟ್ರಾಫಿಕ್ ಸಮಸ್ಯೆ ಆಗುತ್ತದೆ ಎಂದು ತಿಳಿಸಿದ್ದರಿಂದ ನಾನು ಸಂಜೆ 6.00 ಗಂಟೆ ಸಮಯಕ್ಕೆ ಅಲ್ಲಿಗೆ ಹೋದೆ.

7. ಆ ಸಮಯದಲ್ಲಿ ಯಾವುದೇ ಮೊಕದ್ದಮೆ ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಅಲ್ಲಿ ಸಾರ್ವಜನಿಕರು ವಾಹನ ನಿಲ್ಲಿಸುತ್ತಾರೆ ಎಂದು ಚಾಸಾ.20 ರವರು ನನಗೆ ತಿಳಿಸಿದ್ದರು. ನಾನು ಸಂಜೆ 6.00 ಗಂಟೆಗೆ ಸ್ಥಳಕ್ಕೆ ಹೋಗುವ ಮೊದಲು ನನಗೆ ಚಾಸಾ.20 ರವರು ನೀಡಿದ ಮಾಹಿತಿ ಹೊರತುಪಡಿಸಿ ಬೇರೆ ಮಾಹಿತಿ ಇರಲಿಲ್ಲ.

8. ಗಲಾಟೆ ನಡೆದಾಗ ನಾನು ಹಾಜರಿದ್ದ ಬಗ್ಗೆ ನನ್ನ ಡೈರಿಯಲ್ಲಿ ನಮೂದಿಸಿದ್ದೇನೆ. ನನ್ನ ಡೈರಿಯ ಪ್ರತಿಯನ್ನು ತನಿಖಾಧಿಕಾರಿ ಪಡೆದಿಲ್ಲ. ಮು.ಮಾ.1 ನ್ನು ನಾನು ಠಾಣೆಗೆ ಒಯ್ದು ಇಡುವ ಸಮಯದಲ್ಲಿ ತಕ್ಷಣ ದೂರು ಸಲ್ಲಿಸಲು ತೊಂದರೆ ಇರಲಿಲ್ಲ. ಅಂದು ರಾತ್ರಿ 9.00 ಗಂಟೆಗೆ ಮೊದಲೆ ಠಾಣೆಗೆ ಬೇಟಿ ಆಗಿ ಮು.ಮಾ.1 ನ್ನು ಸ್ಥಳದಿಂದ ತಂದಿರುವ ಬಗ್ಗೆ ಚಾಸಾ.20 ರವರಿಗೆ ಮಾಹಿತಿ ನೀಡಿದ್ದೇನೆ. ಆಗ ರಾತ್ರಿ 8.00 ಗಂಟೆ ಸಮಯ ಆಗಿತ್ತು.

9. ಚಾಸಾ.20 ರವರು ಆ ಸಮಯದಲ್ಲಿ ನನ್ನನ್ನು ವಿಚಾರಿಸಿಲ್ಲ. ಚಾಸಾ.20 ರವರು ತಕ್ಷಣ ಯಾವುದೇ ಬರವಣಿಗೆ ಮಾಡಿ ನನ್ನ ಸಹಿ ಪಡೆದಿಲ್ಲ. ನಿಪಿ.5 ರ ಮಹಜರನ್ನು ನನ್ನ ಸಮಕ್ಷಮ ತಯಾರಿಸಿ ಮು.ಮಾ.1 ನ್ನು ಅಮಾನತುಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ